# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | **389 (440)** |
| **ಮಾನ್ಯ ಸದಸ್ಯರ ಹೆಸರು** | **ಶ್ರೀ ಶಿವಕುಮಾರ್ .ಕೆ (ನಾಮನಿರ್ದೇಶಿತರು)** |
| **ಉತ್ತರಿಸಬೇಕಾದ ದಿನಾಂಕ** | **30 /01/2026** |
| **ಉತ್ತರಿಸುವವರು** | **ಮಾನ್ಯ ಕಾರ್ಮಿಕ ಸಚಿವರು** |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಮಾಧ್ಯಮ ಕ್ಷೇತ್ರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪತ್ರಿಕಾ ಮಾನ್ಯತಾ ಚೀಟಿ ಹೊಂದಿಲ್ಲದ ವರದಿಗಾರರು ಹಾಗೂ ಕ್ಯಾಮೆರಾ ಮೆನ್‌ಗಳಿಗೆ ಕಾರ್ಮಿಕ ಇಲಾಖೆಯಿಂದ ಕಲ್ಪಿಸಿರುವ ಸೌಲಭ್ಯಗಳು ಯಾವುದು; | ಮಾಧ್ಯಮ ಕ್ಷೇತ್ರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪತ್ರಿಕಾ ಮಾನ್ಯತಾ ಚೀಟಿ ಹೊಂದಿಲ್ಲದ ವರದಿಗಾರರು ಹಾಗೂ ಕ್ಯಾಮೆರಾ ಮೆನ್‌ಗಳಿಗೆ ಕಾರ್ಮಿಕ ಇಲಾಖೆಯ ಅಧೀನ ಮಂಡಳಿಯಾದ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯಿಂದ ಯಾವುದೇ ಸೌಲಭ್ಯವನ್ನು ಕಲ್ಪಿಸಿರುವುದಿಲ್ಲ. |
| ಆ) | ಕಾರ್ಮಿಕ ಇಲಾಖೆಯಡಿ ಅಸಂಘಟಿತ ಕಾರ್ಮಿಕರಿಗೆ ಒದಗಿಸಲಾಗಿರುವ ಸೌಲಭ್ಯಗಳನ್ನು ಇದುವರೆಗೆ ಒದಗಿಸುವ ಚಿಂತನೆ ಸರ್ಕಾರದ ಮುಂದಿದೆಯೇ? | ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು ಜಾರಿಗೊಳಿಸುತ್ತಿರುವ ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆಯಡಿ ಅಸಂಘಟಿತ ವೃತ್ತಿಯಲ್ಲಿ ತೊಡಗಿರುವ ಒಟ್ಟು 102 ವರ್ಗಗಳ ಕಾರ್ಮಿಕರ ಪಟ್ಟಿಯಲ್ಲಿ (**ಅನುಬಂಧದಲ್ಲಿರುವಂತೆ**) ಕ್ರ.ಸಂ.15 ರಲ್ಲಿನ "ಫೋಟೋಗ್ರಾಫರ್ ಗಳು" ವರ್ಗದ ಅಡಿಯಲ್ಲಿ ನೊಂದಾಯಿಸಲ್ಪಟ್ಟರೆ, ಸದರಿ ವರದಿಗಾರರು ಹಾಗೂ ಕ್ಯಾಮೆರಾಮೆನ್‌ಗಳಿಗೆ ಇತರೆ ಅಸಂಘಟಿತ ವರ್ಗದ ಕಾರ್ಮಿಕರಿಗೆ ದೊರಕುವ ಈ ಕೆಳಕಂಡ ಸೌಲಭ್ಯಗಳನ್ನು ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯಿಂದ ಒದಗಿಸಲಾಗುವುದು.<br><br>**ದೊರಕುವ ಸೌಲಭ್ಯಗಳು:**<br><br>**ಅ) ಅಪಘಾತ ಪರಿಹಾರ ಸೌಲಭ್ಯ:**<br>• ಅಪಘಾತದಿಂದ ಮರಣ ಹೊಂದಿದಲ್ಲಿ ಅವರ ನಾಮನಿರ್ದೇಶಿತರಿಗೆ ರೂ.1 ಲಕ್ಷ ಪರಿಹಾರ.<br>• ಅಪಘಾತದಿಂದ ಶಾಶ್ವತ/ ಭಾಗಶಃ ದುರ್ಬಲತೆ ಹೊಂದಿದಲ್ಲಿ ರೂ.1.00 ಲಕ್ಷಗಳವರೆಗೆ ಪರಿಹಾರ (ಶೇಕಡವಾರು ದುರ್ಬಲತೆ ಆಧಾರದ ಮೇಲೆ).<br>• ಆಸ್ಪತ್ರೆ ವೆಚ್ಚ ಮರುಪಾವತಿ ರೂ.50,000/-ಗಳವರೆಗೆ. (ಅಪಘಾತ ಪ್ರಕರಣಗಳಲ್ಲಿ ಮಾತ್ರ)<br><br>**ಆ) ಸಹಜ ಮರಣ ಪರಿಹಾರ ಮತ್ತು ಅಂತ್ಯಕ್ರಿಯೆ ವೆಚ್ಚ:** ಫಲಾನುಭವಿಯ ಕುಟುಂಬದವರಿಗೆ ಅಂತ್ಯಕ್ರಿಯೆ ವೆಚ್ಚಕ್ಕಾಗಿ ರೂ.10,000/-ಗಳ ಧನ ಸಹಾಯ.<br><br>➢ **ಪರಿಹಾರ ವಿತರಣೆ:**<br>• ಈವರೆಗೆ 14 ಪ್ರಕರಣದಲ್ಲಿ ಒಟ್ಟು ರೂ.3.20 ಲಕ್ಷಗಳ ಪರಿಹಾರ ವಿತರಿಸಿದೆ. |

1. **<u>ಕರ್ನಾಟಕ ರಾಜ್ಯ ಗಿಗ್ ಕಾರ್ಮಿಕರ ವಿಮಾ ಯೋಜನೆ:</u>**

ಇ-ಕಾಮರ್ಸ್ ವಲಯಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಗಿಗ್ ಕಾರ್ಮಿಕರನ್ನು ಸೇವಾ ಸಿಂಧು ಪೋರ್ಟಲ್ ಮೂಲಕ ನೋಂದಾಯಿಸಲಾಗುತ್ತಿದ್ದು, ಇವರಿಗೆ ತಲಾ 2.00 ಲಕ್ಷ ರೂ.ಗಳ ಅಪಘಾತ ಪರಿಹಾರ ಹಾಗೂ ಜೀವ ವಿಮಾ ಸೌಲಭ್ಯ ಸೇರಿದಂತೆ ಒಟ್ಟು 4.00 ಲಕ್ಷ ರೂ.ಗಳ ವಿಮಾ ಸೌಲಭ್ಯ ಒದಗಿಸುವ "ಕರ್ನಾಟಕ ರಾಜ್ಯ ಗಿಗ್ ಕಾರ್ಮಿಕರ ವಿಮಾ ಯೋಜನೆ"ಯನ್ನು ಜಾರಿಗೊಳಿಸುತ್ತಿದೆ. **ಈವರೆಗೆ ಒಟ್ಟು 30,256 ಗಿಗ್ ಕಾರ್ಮಿಕರು** ನೋಂದಾಯಿತರಾಗಿರುತ್ತಾರೆ.

➢ **ಪರಿಹಾರ ವಿತರಣೆ:**

- ಈವರೆಗೆ 5 ಅಪಘಾತ ಪ್ರಕರಣಗಳಲ್ಲಿ ಒಟ್ಟು ರೂ.6.79 ಲಕ್ಷಗಳ ಪರಿಹಾರ ವಿತರಿಸಿದೆ.

2. **<u>ಕರ್ನಾಟಕ ರಾಜ್ಯ ದಿನಪತ್ರಿಕೆ ಹಾಗೂ ಹಾಲು ವಿತರಣಾ ಕಾರ್ಮಿಕರ ಅಪಘಾತ ಪರಿಹಾರ ಮತ್ತು ವೈದ್ಯಕೀಯ ಸೌಲಭ್ಯ ಯೋಜನೆ:</u>**

ದಿನಪತ್ರಿಕೆ ಹಾಗೂ ಹಾಲು ವಿತರಿಸುವ ಕಾರ್ಮಿಕರಿಗೆ ರೂ.2.00 ಲಕ್ಷಗಳ ಅಪಘಾತ ಮರಣ ಪರಿಹಾರ, ರೂ. 1.00 ಲಕ್ಷದವರೆಗೆ ವೈದ್ಯಕೀಯ ಸೌಲಭ್ಯ ಹಾಗೂ ರೂ. 10,000/- ಸಹಜ ಮರಣ ಪರಿಹಾರ ಮತ್ತು ಅಂತ್ಯ ಕ್ರಿಯೆ ವೆಚ್ಚವನ್ನು ಒದಗಿಸುವ "ಕರ್ನಾಟಕ ರಾಜ್ಯ ದಿನಪತ್ರಿಕೆ ಹಾಗೂ ಹಾಲು ವಿತರಣಾ ಕಾರ್ಮಿಕರ ಅಪಘಾತ ಪರಿಹಾರ ಮತ್ತು ವೈದ್ಯಕೀಯ ಸೌಲಭ್ಯ ಯೋಜನೆ"ಯನ್ನು ಜಾರಿಗೊಳಿಸಲಾಗಿದ್ದು, **ಈವರೆಗೆ ಒಟ್ಟು 11,406 ಕಾರ್ಮಿಕರು** ನೋಂದಾಯಿತರಾಗಿರುತ್ತಾರೆ.

➢ **ಪರಿಹಾರ ವಿತರಣೆ:**

- ಈವರೆಗೆ 4 ಅಪಘಾತ ಪ್ರಕರಣಗಳಲ್ಲಿ ಒಟ್ಟು ರೂ.5.23 ಲಕ್ಷಗಳ ಪರಿಹಾರ ವಿತರಿಸಿದೆ.

3. **<u>ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆ :</u>**

ಈ ಯೋಜನೆಯಡಿ ಖಾಸಗಿ ವಾಣಿಜ್ಯ ಸಾರಿಗೆ ವಾಹನಗಳ ಚಾಲಕರು, ನಿರ್ವಾಹಕರು ಹಾಗೂ ಕ್ಲೀನರ್ ಗಳಿಗೆ ರೂ.5.00 ಲಕ್ಷಗಳವರೆಗೆ ಅಪಘಾತ ಪರಿಹಾರ ಸೌಲಭ್ಯ ಒದಗಿಸಲಾಗುತ್ತಿದ್ದು, **ಈವರೆಗೆ ಒಟ್ಟು 1791 ಅಪಘಾತ ಪ್ರಕರಣಗಳಲ್ಲಿ ರೂ.7110.69 ಲಕ್ಷಗಳ** ಪರಿಹಾರ ವಿತರಿಸಲಾಗಿದೆ . ಈ ಯೋಜನೆಯಡಿ ಅಪಘಾತದಿಂದ ನಿಧನರಾದ ಹಾಗೂ ಸಂಪೂರ್ಣ ಶಾಶ್ವತ ದುರ್ಬಲತೆ ಹೊಂದಿದ ಫಲಾನುಭವಿಯ ಗರಿಷ್ಠ ಇಬ್ಬರು ಮಕ್ಕಳಿಗೆ 1ನೇ ತರಗತಿಯಿಂದ ಪದವಿ ಪೂರ್ವ ವ್ಯಾಸಂಗದವರೆಗೆ ವಾರ್ಷಿಕ ತಲಾ ರೂ.10,000/-ಗಳ "ಶೈಕ್ಷಣಿಕ ಸಹಾಯಧನ"ಸೌಲಭ್ಯ ನೀಡಲಾಗುತ್ತಿದ್ದು, **ಈವರೆಗೆ ಒಟ್ಟು 1783 ಫಲಾನುಭವಿ** ವಿದ್ಯಾರ್ಥಿಗಳಿಗೆ **ರೂ.178.30 ಲಕ್ಷಗಳ** ಶೈಕ್ಷಣಿಕ ಸಹಾಯಧನ ವಿತರಿಸಲಾಗಿದೆ.

**4. ಕರ್ನಾಟಕ ಮೋಟಾರು ಸಾರಿಗೆ ಹಾಗೂ ಇತರೆ ಸಂಬಂಧಿತ ಕಾರ್ಮಿಕರ ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ ಮಂಡಳಿ (The Karnataka Motor Transport And Other Allied Workers Social Security and Welfare Board):**

ಅಸಂಘಟಿತ ವರ್ಗದ ಕಾರ್ಮಿಕರಲ್ಲಿ ಬಹುಸಂಖ್ಯೆಯ ಕಾರ್ಮಿಕರನ್ನು ಹೊಂದಿರುವ, ಖಾಸಗಿ ವಾಣಿಜ್ಯ ಸಾರಿಗೆ ವಾಹನಗಳಾದ ಆಟೋ, ಟ್ಯಾಕ್ಸಿ, ಮ್ಯಾಕ್ಸಿಕ್ಯಾಬ್, ಲಾರಿ, ಬಸ್ ಇತ್ಯಾದಿ ವಾಹನಗಳ ಕಾರ್ಮಿಕರು ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ದುರ್ಬಲರಾಗಿರುತ್ತಾರೆ. ಸದರಿ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಹಾಗೂ ಕಲ್ಯಾಣ ಸೌಲಭ್ಯಗಳನ್ನು ಒದಗಿಸುವ ಉದ್ದೇಶದಿಂದ, ಅವಶ್ಯಕವಿರುವ ಸಂಪನ್ಮೂಲವನ್ನು ಕ್ರೋಢೀಕರಿಸಲು ಕರ್ನಾಟಕ ಮೋಟಾರು ಸಾರಿಗೆ ಮತ್ತು ಇತರೆ ಸಂಬಂಧಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮತ್ತು ಕಲ್ಯಾಣ ಸುಂಕ ಅಧಿನಿಯಮ-2024 (Karnataka Motor Transport and Other Allied Workers Social Security and Welfare Cess Bill, 2024) ನ್ನು ರೂಪಿಸಿ ಜಾರಿಗೆ ತಂದಿದ್ದು, ಇದಕ್ಕನುಗುಣವಾಗಿ ಕರ್ನಾಟಕ ಮೋಟಾರು ಸಾರಿಗೆ ಮತ್ತು ಇತರ ಸಂಬಂಧಿತ ಕಾರ್ಮಿಕರ ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ ನಿಯಮಾವಳಿಗಳು, 2024 ಅನ್ನು ರಚಿಸಿರುತ್ತದೆ. ಸದರಿ ಕಾಯ್ದೆಯ ಕಲಂ 3 ರನ್ವಯ ಕರ್ನಾಟಕ ಮೋಟಾರು ಸಾರಿಗೆ ಮತ್ತು ಇತರೆ ಸಂಬಂಧಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮತ್ತು ಕ್ಷೇಮಾಭಿವೃದ್ಧಿ ಮಂಡಳಿಯನ್ನು ರಚಿಸಲಾಗಿರುತ್ತದೆ.

**ಫಲಾನುಭವಿಗಳು :**

ಈ ಕಾಯ್ದೆಯಡಿ, ಮೋಟಾರು ಸಾರಿಗೆ ಸಂಸ್ಥೆಯಲ್ಲಿ ನೇರವಾಗಿ ಅಥವಾ ಏಜೆನ್ಸಿಯ ಮೂಲಕ ಕೆಲಸಮಾಡುತ್ತಿರುವ ವ್ಯಕ್ತಿ, ಚಾಲಕರು, ನಿರ್ವಾಹಕರು, ಕ್ಲೀನರ್, ಸ್ಟೇಷನ್ ಸಿಬ್ಬಂದಿ, ಲೈನ್ ಚೆಕಿಂಗ್ ಸಿಬ್ಬಂದಿ, ಬುಕ್ಕಿಂಗ್ ಗುಮಾಸ್ತ, ನಗದು ಗುಮಾಸ್ತ, ಡಿಪೋ ಗುಮಾಸ್ತ, ಭದ್ರತಾ ಸಿಬ್ಬಂದಿಗಳು, ಸಾರಿಗೆ ವಾಹನಗಳ ಆಗಮನ, ನಿರ್ಗಮನ, ಲೋಡಿಂಗ್ ಮತ್ತು ಅನ್ ಲೋಡಿಂಗ್‌ಗೆ ಸಂಬಂಧಿಸಿದ ಕರ್ತವ್ಯಗಳನ್ನು ನಿರ್ವಹಿಸುತ್ತಿರುವ ಕಾರ್ಮಿಕರು, ಮೋಟಾರು ಗ್ಯಾರೇಜ್‌ಗಳಲ್ಲಿ, ಟೈರ್ ರಿಟ್ರೆಡ್ಡಿಂಗ್ ಮತ್ತು ರಿಸೋಲಿಂಗ್ ಘಟಕಗಳು, ಪಂಕ್ಚರ್ ರಿಪೇರಿ ಅಂಗಡಿಗಳಲ್ಲಿ ಕೆಲಸ ಮಾಡುವ ವ್ಯಕ್ತಿಗಳು, ಆಟೋ ಮೊಬೈಲ್ ಬಾಡಿಬಿಲ್ಡಿಂಗ್ ಘಟಕಗಳಲ್ಲಿ ಕೆಲಸ ಮಾಡುವ ಹಾಗೂ ಸಾರಿಗೆ ಸಂಬಂಧಿತ ಇತರೆ ಕಾರ್ಮಿಕರು ಸೇರಿರುತ್ತಾರೆ. **ಈವರೆಗೆ ಒಟ್ಟು 10,50,095 ಕಾರ್ಮಿಕರು** ಫಲಾನುಭವಿಗಳಾಗಿ ನೋಂದಾಯಿತರಾಗಿರುತ್ತಾರೆ.

**ಈ ಕಾಯ್ದೆಯಡಿ ಸಂಗ್ರಹವಾಗಬಹುದಾದ ಅನುದಾನದಿಂದ ಅರ್ಹ ಕಾರ್ಮಿಕರಿಗೆ ಈ ಕೆಳಕಂಡ ಸೌಲಭ್ಯಗಳನ್ನು ಒದಗಿಸಲು ಪ್ರಸ್ತಾಪಿಸಲಾಗಿದೆ.**

**a) ಅಪಘಾತ ಪರಿಹಾರ :**

- ಅಪಘಾತದಿಂದ ಫಲಾನುಭವಿಗಳು ನಿಧನರಾದಲ್ಲಿ, ನಾಮನಿರ್ದೇಶಿತರಿಗೆ ರೂ.5 ಲಕ್ಷ ಪರಿಹಾರ.
- ಅಪಘಾತದಿಂದ ಶಾಶ್ವತ ದುರ್ಬಲತೆ ಹೊಂದಿದಾಗ, ಫಲಾನುಭವಿಗೆ ದುರ್ಬಲತೆಯ ಪ್ರಮಾಣಕ್ಕನುಗುಣವಾಗಿ ರೂ.2 ಲಕ್ಷದವರೆಗೆ ಪರಿಹಾರ.

- ಅಪಘಾತದಿಂದ ತಾತ್ಕಾಲಿಕ ದುರ್ಬಲತೆ ಹೊಂದಿದಾಗ- ಗರಿಷ್ಠ ರೂ. 1 ಲಕ್ಷದವರೆಗೆ

b) **ನೈಸರ್ಗಿಕ ಮರಣ ಪರಿಹಾರ ಹಾಗೂ ಅಂತ್ಯ ಸಂಸ್ಕಾರ ವೆಚ್ಚ:** ಸಹಜ ಮರಣ ಹೊಂದಿದ ಫಲಾನುಭವಿಗಳ ಅವಲಂಬಿತರಿಗೆ ಅಂತ್ಯ ಸಂಸ್ಕಾರದ ವೆಚ್ಚವೂ ಸೇರಿದಂತೆ ರೂ.25,000/-ಗಳ ಪರಿಹಾರ.

c) **ಶೈಕ್ಷಣಿಕ ಧನಸಹಾಯ** : ನೋಂದಾಯಿತ ಮೋಟಾರು ಸಾರಿಗೆ ಮತ್ತು ಇತರೆ ಸಂಬಂಧಿತ ಕಾರ್ಮಿಕರ ಗರಿಷ್ಠ ಇಬ್ಬರು ಮಕ್ಕಳಿಗೆ:-

- 12ನೇ ತರಗತಿ ಅಥವಾ ತತ್ಸಮಾನ – ವಾರ್ಷಿಕ ತಲಾ ರೂ.3,000/-
- ಪದವಿ ಅಥವಾ ತತ್ಸಮಾನ – ವಾರ್ಷಿಕ ತಲಾ ರೂ.5,500/-
- ಇಂಜಿನಿಯರಿಂಗ್ ಹಾಗೂ ವೈದ್ಯಕೀಯ ಶಿಕ್ಷಣಕ್ಕಾಗಿ – ವಾರ್ಷಿಕ ತಲಾ ರೂ.8,000/-
- ಸ್ನಾತಕೋತ್ತರ ಪದವಿಗಾಗಿ – ವಾರ್ಷಿಕ ತಲಾ ರೂ.11,000/-

d) **ಅಪಘಾತದಿಂದ ನಿಧನರಾದ/ಸಂಪೂರ್ಣ ಶಾಶ್ವತ ದುರ್ಬಲತೆ ಹೊಂದಿದ ಮೋಟಾರು ಸಾರಿಗೆಮತ್ತು ಇತರೆ ಸಂಬಂಧಿತ ಕಾರ್ಮಿಕರ ಗರಿಷ್ಠ ಇಬ್ಬರು ಮಕ್ಕಳಿಗೆ:-**

- 1ನೇ ತರಗತಿಯಿಂದ ಪದವಿ ಅಥವಾ ತತ್ಸಮಾನ – ವಾರ್ಷಿಕ ತಲಾ ರೂ.10,000/-
- ಇಂಜಿನಿಯರಿಂಗ್ ಹಾಗೂ ವೈದ್ಯಕೀಯ ಶಿಕ್ಷಣಕ್ಕಾಗಿ – ವಾರ್ಷಿಕ ತಲಾ ರೂ.20,000/-
- ಸ್ನಾತಕೋತ್ತರ ಪದವಿಗಾಗಿ – ವಾರ್ಷಿಕ ತಲಾ ರೂ.25,000/-

e) **ಹೆರಿಗೆ ಸಹಾಯ ಧನ:** ನೋಂದಾಯಿತ ಮಹಿಳಾ ಫಲಾನುಭವಿಯ ಮೊದಲ ಎರಡು ಜೀವಂತ ಹೆರಿಗೆಗಳಿಗೆ ಮಾತ್ರ ಸೀಮಿತಗೊಂಡಂತೆ ತಲಾ ರೂ.10,000/-ಗಳಂತೆ ಹೆರಿಗೆ ಸಹಾಯಧನ.

**5. ಇ-ಶ್ರಮ್ ಪೋರ್ಟಲ್‌ನಲ್ಲಿ ಅಸಂಘಟಿತ ಕಾರ್ಮಿಕರ ನೋಂದಣಿ:-**

ಕೇಂದ್ರ ಸರ್ಕಾರದ ಕಾರ್ಮಿಕ ಮತ್ತು ಉದ್ಯೋಗ ಮಂತ್ರಾಲಯವು ಅಸಂಘಟಿತ ಕಾರ್ಮಿಕರ ದತ್ತಾಂಶವನ್ನು ಸಂಗ್ರಹಿಸುವ ಉದ್ದೇಶದಿಂದ, ಇ-ಶ್ರಮ್ ಪೋರ್ಟಲ್ ಅನ್ನು ಅಭಿವೃದ್ಧಿಪಡಿಸಿದ್ದು, **406** ವಿವಿಧ ಅಸಂಘಟಿತ ವರ್ಗಗಳ ಕಾರ್ಮಿಕರನ್ನು ನೋಂದಾಯಿಸಲಾಗುತ್ತಿದೆ. ರಾಜ್ಯದಲ್ಲಿ **ಈವರೆಗೆ ಒಟ್ಟು 1,10,24,232 ಕಾರ್ಮಿಕರು** ನೋಂದಾಯಿತರಾಗಿರುತ್ತಾರೆ.

**ಕಾಇ 45 ಎಲ್‌ಇಟಿ 2026**

**(ಸಂತೋಷ್ ಎಸ್ ಲಾಡ್)**
**ಕಾರ್ಮಿಕ ಸಚಿವರು**

# ಅನುಬಂಧ

## ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಶಿವಕುಮಾರ್. ಕೆ (ನಾಮನಿರ್ದೇಶಿತರು) ಇವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: 440

### ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆಯಡಿ ಗುರುತಿಸಲಾದ 102 ಅಸಂಘಟಿತ ವರ್ಗಗಳ ಪಟ್ಟಿ

| | | | | | |
|---|---|---|---|---|---|
| 1 | ಹಮಾಲರು<br>Hamalis | 2 | ಟೈಲರ್‌ಗಳು<br>Tailors | 3 | ಗೃಹ ಕಾರ್ಮಿಕರು<br>Domestic workers |
| 4 | ಅಗಸರು<br>Washermen | 5 | ಚಿಂದಿ ಆಯುವವರು<br>Rag pickers | 6 | ಅಕ್ಕಸಾಲಿಗರು<br>Goldsmith |
| 7 | ಕಮ್ಮಾರರು<br>Ironsmith | 8 | ಕುಂಬಾರರು<br>Potters | 9 | ಕ್ಷೌರಿಕರು<br>Barbers |
| 10 | ಭಟ್ಟಿ ಕಾರ್ಮಿಕರು<br>Kiln workers | 11 | ಸಿನಿ ಕಾರ್ಮಿಕರು<br>Cine workers | 12 | ನೇಕಾರರು<br>Weavers |
| 13 | ಬೀದಿಬದಿ ವ್ಯಾಪಾರಿಗಳು<br>Street vendors | 14 | ಹೋಟೆಲ್ ಕಾರ್ಮಿಕರು<br>Hotel workers | 15 | ಫೋಟೋಗ್ರಾಫರ್‌ಗಳು<br>Photographers |
| 16 | ಸ್ವತಂತ್ರ ಲೇಖನ ಬರಹಗಾರರು<br>Freelance writers | 17 | ಬೀಡಿ ಕಾರ್ಮಿಕರು<br>Beedi workers | 18 | ಕಲ್ಯಾಣ ಮಂಟಪ/ಸಭಾ ಭವನ/ ಟೆಂಟ್/ ಪೆಂಡಾಲ್‌ಗಳ ಕೆಲಸ ನಿರ್ವಹಿಸುವ ಎಲ್ಲಾ ಕಾರ್ಮಿಕರು<br>Workers working in Kalyana mantapam/sabha bhavan/Tent/Pendals |
| 19 | ಅಸಂಘಟಿತ ವಿಕಲಚೇತನ ಕಾರ್ಮಿಕರು<br>Unorganised disabled persons | 20 | ಅಲೆಮಾರಿ ಪಂಗಡದ ಕಾರ್ಮಿಕರು<br>Nomadic tribes workers (Alemari pangada) | 21 | ಹಗ್ಗ ಸಿದ್ಧಪಡಿಸುವ (ಬೈಜಂತ್ರಿ) ಕಾರ್ಮಿಕರು<br>Rope Making Worker (Bygentri) |
| 22 | ಉಪ್ಪನ್ನು ತಯಾರಿಸುವ ಉಪ್ಪಾರರು<br>Salt Makers (Upparas) | 23 | ಬಿದಿರು ವೃತ್ತಿಯಲ್ಲಿ ತೊಡಗಿರುವ ಮೇದಾರರು<br>Bamboo workers ( Medaras) | 24 | ಗಾದಿ, ಹಾಸಿಗೆ ಮತ್ತು ದಿಂಬು ತಯಾರಿಕೆ ತೊಡಗಿರುವ ಕಾರ್ಮಿಕರು(ಪಿಂಜಾರರು/ನದಾಫರು)<br>workers engaged in making quilts, mattresses, and pillows, traditionally known as **(Pinjaras/Nadafars)** |
| 25 | ಚಪ್ಪಲಿ ತಯಾರಿಕೆ ಮತ್ತು ರಿಪೇರಿ ಮಾಡುವ ಕಾರ್ಮಿಕರಾದ ಚಮ್ಮಾರರು Cobblers | 26 | ಕೇಬಲ್ ಕಾರ್ಮಿಕರು Cable Workers | | |

## ಹಿಂದುಳಿದ ವರ್ಗಗಳ ಪ್ರವರ್ಗ-1, 2ಎ, 3ಎ ಮತ್ತು 3ಬಿಗೆ ಸೇರಿದ ಪಾರಂಪರಿಕ ವೃತ್ತಿಯಲ್ಲಿ ತೊಡಗಿರುವ ಕಾರ್ಮಿಕರು

| | | | | | |
|---|---|---|---|---|---|
| 27 | ಬಡಗಿ ಕೆಲಸ/ಮರದ ಕೆತ್ತನೆ ಕೆಲಸ<br>Carpentry/Wood carving | 28 | ಉಣ್ಣೆ ಮತ್ತು ಕಂಬಳಿ ನೇಯ್ಗೆ ಹಾಗೂ ಕಂಬಳಿ ತಯಾರಿಕೆ<br>Woolen blanket weaving | 29 | ಅಡಿಕೆ ಹಾಳೆಯಿಂದ ತಟ್ಟೆ ತಯಾರಿಕೆ Areca Leaf Plate making |
| 30 | ಸಿಲ್ಕ್ ರೀಲಿಂಗ್ ಮತ್ತು ಸಿಲ್ಕ್ ಟ್ವಿಸ್ಟಿಂಗ್ ಕೆಲಸ<br>Silk reeling and silk twisting work | 31 | ಪೊರಕೆ ಕಡ್ಡಿ ತಯಾರಿಕೆ<br>Broom stick straws making | 32 | ಸುಣ್ಣ ಸುಡುವುದು<br>Limestone kilns |
| 33 | ವಾಲಗ ಊದುವುದು<br>Single reed wind instrument (valaga) playing | 34 | ದನಗಾಹಿ ವೃತ್ತಿ, ಹೈನುಗಾರಿಕೆ(ಗೌಳಿ ವೃತ್ತಿ)<br>Cattle breeding, dairy farming | 35 | ಬಳೆ ವ್ಯಾಪಾರ/ಮೇಣದ ಬತ್ತಿ ತಯಾರಿಕೆ<br>Bangle maker/seller candle maker |
| 36 | ಕಂಚು ಕೆಲಸ<br>Bronze work | 37 | ನಾರಿನಿಂದ ವಿವಿಧ ಉತ್ಪನ್ನ ತಯಾರಿಕೆ<br>Jute products making | 38 | ಬೆತ್ತದ ಕೆಲಸ (ರಟ್ಟನ್) ಆಟಿಕೆ/ಗೊಂಬೆ ತಯಾರಿಕೆ ಮತ್ತು ಕೆತ್ತನೆ ಕೆಲಸ<br>Cane work / doll making / Carving work |
| 39 | ಚರ್ಮದ ವಸ್ತುಗಳ ತಯಾರಿಕೆ<br>Leather products manufacturing | 40 | ಅಗರಬತ್ತಿ ತಯಾರಿಕೆ<br>Incense sticks making | 41 | ಕಾಯರ್ ಫೈಬರ್ ತಯಾರಿಕೆ<br>Coir fiber manufacturing |
| 42 | ಸ್ಮಶಾನ ಕಾರ್ಮಿಕರು<br>Graveyard workers | 43 | ವಿಗ್ರಹ/ ಕಲ್ಲು ಕೆತ್ತನೆ ಕೆಲಸ<br>Idol/stone carving work | 44 | ಮೀನುಗಾರಿಕೆ<br>Fisheries Industry |
| 45 | ನಾಟಿ ಔಷಧಿ ತಯಾರಿಕೆ<br>Traditional Native medicine production | 46 | ಬಣ್ಣ ಶೃಂಗಾರ (ಬ್ಯೂಟಿ ಪಾರ್ಲರ್) ಮಾಡುವ ವೃತ್ತಿ<br>Beauty Parlour profession (beauticians) | 47 | ಶೀಟ್ ಮೆಟಲ್ ವೃತ್ತಿ<br>Sheet metal profession |
| 48 | ಬೈಸಿಕಲ್ ರಿಪೇರಿ<br>Bicycle repair | 49 | ಬಣ್ಣಗಾರಿಕೆ, ಮುದ್ರಣಗಾರಿಕೆ ಮತ್ತು ಹಚ್ಚೆ ಹಾಕುವುದು<br>Tattoo art, Makeup art | 50 | ಮ್ಯಾಟ್ ತಯಾರಿಕೆ<br>Mat production |
| 51 | ಗಾಡಿ/ರಥ ತಯಾರಿಕೆ<br>Cart/chariot making | 52 | ಗ್ಲಾಸ್ ಬೀಡ್ಸ್ ತಯಾರಿಕೆ<br>Glass Beads production | 53 | ಮೆಟಲ್ ಕ್ರಾಫ್ಟ್ಸ್,<br>Metal Crafts |
| 54 | ಟಿನ್ ವಸ್ತುಗಳ ತಯಾರಿಕೆ<br>Tin products making | 55 | ಜೇನು ಸಾಕಾಣಿಕೆ<br>Bee keeping | 56 | ನಿಟ್ಟಿಂಗ್ ಕೆಲಸ<br>Knitting work |
| 57 | ಗಾಣದ ಕೆಲಸ<br>Sugarcane / oilseeds crushing | 58 | ಮೆಷನರಿ ವರ್ಕ್<br>Machinery work | 59 | ಹೂವು ಕಟ್ಟುವ ವೃತ್ತಿ<br>Garland making |
| 60 | ಹೊಸೈರಿ ವಸ್ತುಗಳ ತಯಾರಿಕೆ<br>Hosiery making | 61 | ಪಾತ್ರೆಗಳಿಗೆ ಕಲಾಯಿ<br>Alloying utensils | 62 | ವಾದ್ಯ ವೃಂದ ವೃತ್ತಿ<br>Music band |
| 63 | ವೆಲ್ಡಿಂಗ್ ವರ್ಕ್ಸ್<br>Welding Works | 64 | ಕುರಿ ಸಾಕಾಣಿಕೆ<br>Sheep Husbandry | | |

| | | | | | |
|---|---|---|---|---|---|
| 65 | ಧಾರ್ಮಿಕ ಭಿಕ್ಷುಕ ವೃತ್ತಿ<br>Religious Alms Seekers | 66 | ಭವಿಷ್ಯ ನುಡಿಯುವುದು, ಲಾವಣಿ ಪದಗಳನ್ನು ಹಾಡುವುದು, ಹವಾಮಾನ ಪ್ರವಾದಿಗಳು<br>Fortune Telling, Ballad Singers, Weather Forecasters | 67 | ಹಳ್ಳಿಗಾಡಿನ ಸಾಹಸ ಕಲೆಗಳ ಪ್ರದರ್ಶನ, ಗುಂಡು ಎಸೆಯುವುದು, ಲಾಗ ಹಾಕುವುದು, ಎತ್ತಿನ ಬಂಡಿ ತಿರುಗಿಸುವುದು, ಇತರೆ ಕಸರತ್ತುಗಳ ವೃತ್ತಿ<br>Rural Adventurous sports exhibition, discus throw, Wrestling and such other exercises. |
| 68 | ದೇವಸ್ಥಾನಗಳಲ್ಲಿ ನರ್ತಿಸುವುದು, ಭಿಕ್ಷಾಟನೆ, ಅಂಬಾದೇವಿಯ ಆರಾಧಕರು, ಗೋಂಧಳಿ | 69 | ಜ್ಯೋತಿಷ್ಯ, ಗಿಣಿ ಶಾಸ್ತ್ರ, ಹಸ್ತ ಮುದ್ರಿಕೆ ಶಾಸ್ತ್ರ, ಬುಡಬುಡಕಿ ಭವಿಷ್ಯ, ಕಣಿ ಹೇಳುವುದು.<br>Astrologers, Tarot using | 70 | ದೇವರ ಕಥೆಗಳು ಹಾಗೂ ಪುರಾಣದ ಕಥೆಗಳನ್ನು ಹೇಳುವ ಹಾಗೂ ಬೊಂಬೆ ಪ್ರದರ್ಶನ<br>Devotional and Purana story telling |

| | | | | | |
|---|---|---|---|---|---|
| | ನೃತ್ಯ ಮಾಡುವುದು.<br>Dancing in temples, begging, Amba Matha worshippers, Gondhali dancers | | parrot, palmistry, Budubudike Astrologers, Kani astrologers | | and Puppet Shows |
| 71 | ಮದುವೆ ಮತ್ತು ಹಬ್ಬದ ದಿನಗಳಂದು ಡೋಲು ಬಡಿದು ಹಾಡು ಹೇಳುವುದು.<br>Drum beaters on marriage and festival ceremonies | 72 | ಅರಿಶಿನ ಕುಂಕುಮ ಮಾರಾಟ, ಮಸಾಲೆ ದಿನಸಿ ಮಾರಾಟ<br>Haldi, kumkum, Spices selling | 73 | ದೊಂಬರಾಟ, ವಿದೂಷಕ<br>Aerobatics and clowns / Comedians |
| 74 | ಮೋಡಿಗಾರರು, ಕಣ್ಣು ಕಟ್ಟು ವಿದ್ಯೆ<br>Magicians and Conjuring Artists | 75 | ಗೊಂದಲು ಹಾಕುವುದು (ಪೂಜಾ ವಿಧಾನ)<br>Gondaliga pooja | 76 | ಗ್ರಾಮಚರಿತ್ರೆಗಳ ಪಾರುಪತ್ತೆಗಾರರು<br>Village record keepers |
| 77 | ತಂಬೂರಿ ಮತ್ತು ಹಾರ್ಮೋನಿಯಂ ಸಹಾಯದಿಂದ ಪದಗಳನ್ನು ಕಟ್ಟಿ ಹಾಡುವುದು<br>Thamboori and Harmonium singers | 78 | ಬೊಂಬೆ, ಹೊದಿಕೆ, ಬಾಚಣಿಗೆ ತಯಾರಿಕೆ, ಹಚ್ಚೆ ಹಾಕುವುದು<br>Doll, Comb makers, Tattoo art | 79 | ಎತ್ತನ್ನು ಹಿಡಿದುಕೊಂಡು ಊರಿಂದ ಊರಿಗೆ ಹೋಗಿ ಭಿಕ್ಷೆ ಬೇಡುವುದು<br>Beggers with Ox |
| 80 | ಹಠಯೋಗ, ಧರ್ಮ ಪ್ರಚಾರ, ಕಾಲಭೈರವನ ಆರಾಧನೆ<br>Hatha Yoga, propagation of religion, worship of Kalabhairava | 81 | ಕತ್ತಿ ತಯಾರಿಕೆ<br>Sword makers | 82 | ಔಷಧ ಮಾರಾಟಗಾರರು, ಭಿಕಾರಿ ವೈದ್ಯ ವೃತ್ತಿ<br>Herbal Medicine sellers, Bhikari doctors |
| 83 | ಗಾರುಡಿಗರು, ಬೀಸುವ ಕಲ್ಲು ಮತ್ತು ಬೀಸಣಿಗೆ ಮಾರಾಟ, ಮರದ ಸೌಟುಗಳ ತಯಾರಿಕೆ, ಸೂಜಿ, ದಾರ, ಒಳಕಲ್ಲು ಮಾರಾಟ<br>Magicians, grinding stone sellers, Hand fan makers, wooden ladle, needle and thread makers | 84 | ಡ್ರಂ ಭಾರಿಸುವುದು ಮತ್ತು ಕೊಳಲು ನುಡಿಸುವುದು,<br>Drum and flute playing | 85 | ಕಬ್ಬಿಣದ, ತಾಮ್ರದ ತಂತಿಗಳನ್ನು ಉಪಯೋಗಿಸಿ ವಿಧವಿಧವಾದ ಬಳೆ ಮತ್ತು ಅಲಂಕಾರಿಕ ವಸ್ತುಗಳನ್ನು ತಯಾರಿಸುವುದು.<br>Metal bangles and other decorative items using iron, copper wires |
| 86 | ತೊಗಲು ಬೊಂಬೆ ಆಡಿಸುವುದು<br>Leather dolls puppet show | 87 | ಮರಗವನ ಆಡಿಸುವುದು<br>Maragavana play (Duruga murugi) | 88 | ಊರೂರು ಅಲೆದು ಬಯಲಾಟಗಳ ಪ್ರದರ್ಶನ<br>Bayalata drama show |
| 89 | ತಾಮ್ರ, ಬೆಳ್ಳಿ, ಕಲ್ಲು, ಹಿತ್ತಾಳೆಗಳಿಂದ ಆಭರಣಗಳನ್ನು ತಯಾರಿಸಿ ಮಾರಾಟ ಮಾಡುವುದು.<br>Copper, Silver, Stone, and Brass ornaments making and selling | 90 | ಅಲೆಮಾರಿ ಪಶುಪಾಲಕರು<br>Nomad cattle breeders | 91 | ಕೋಳಿಮೊಟ್ಟೆ, ಮೀನು ಮಾರಾಟ<br>Eggs and fish sellers |

| | | | | | |
|---|---|---|---|---|---|
| 92 | ಭೂರಹಿತ ಕೃಷಿ ಕಾರ್ಮಿಕರು<br>Landless Agricultural Labour | 93 | ರೇಷ್ಮೆ ವೃತ್ತಿಯಲ್ಲಿ ತೊಡಗಿರುವ ಕಾರ್ಮಿಕರು<br>Workers engaged in Silk | 94 | ಧಾರ್ಮಿಕ ವೃತ್ತಿಪರರು - ದೀಕ್ಷೆ ಪಡೆದ ಧಾರ್ಮಿಕ, ದೀಕ್ಷೆ ಪಡೆಯದ ಧಾರ್ಮಿಕ ಕಾರ್ಮಿಕರು<br>Religious Professionals - Ordained Religious and Non-Ordained Religious Workers |
| 95 | ಪ್ರಾಥಮಿಕ ಶಾಲಾ ಶಿಕ್ಷಕರು-ಬೋಧಕರು ಮತ್ತು ಇತರೆ ಶಿಕ್ಷಕ ಸಹಾಯಕರು (ಮನೆ ಶಿಕ್ಷಕರು, ತರಬೇತಿ ಕೇಂದ್ರ ಶಿಕ್ಷಕರು)<br>Primary School Teachers-Tutors | 96 | ಹಾವನ್ನು ಹಿಡಿಯುವ ಕಾರ್ಮಿಕರು<br>Snake rescuer | 97 | ಪ್ರವಾಸಿ ಗೈಡ್‌ಗಳು<br>Tourist Guides |

| | | | | | |
|---|---|---|---|---|---|
| | and Other Teacher Aides (Home tutors, Coaching centre tutors etc) | | | | |
| 98 | ಮುದ್ರಣ ಕೆಲಸದಲ್ಲಿ ತೊಡಗಿರುವ ಕಾರ್ಮಿಕರು<br>Workers engaged in Printing work | 99 | ಶಿಲ್ಪಕಾರರು/ ಕರ ಕುಶಲ ಕಾರ್ಮಿಕರು<br>Sculptors/Artisans | 100 | ಬೇಕರಿ ಕೆಲಸ ಮಾಡುವವರು<br>Bakery worker |
| 101 | ಅಡುಗೆ ಕೆಲಸ ಮಾಡುವವರು<br>Cooks | 102 | ಗೃಹೋಪಯೋಗಿ ಉಪಕರಣ ದುರಸ್ತಿ ಕಾರ್ಮಿಕರು<br>Mechanic, Repairman Domestic Appliances | | |

*********